# ಗಗನದಲಿ ಸಿನಿಮಿಂಚು!

**‘ಸಾಮರ್ಥ್ಯ’ ಸಿನಿಮಾದ ಮೂಲಕ ಕನ್ನಡ ಚಿತ್ರರಂಗಕ್ಕೆ ಅಡಿಯಿಡುತ್ತಿರುವ ದುಂಡುಮುಖದ ಸುಂದರಿ ಗಗನಾ, ಚಂದನವನದ ನಭದಲ್ಲಿ ತಾರೆಯಾಗಿ ಮಿಂಚುವ ಕನಸಿಗೆ ರೆಕ್ಕೆ ಕಟ್ಟುತ್ತಿದ್ದಾರೆ.**

■ ಪದ್ಮನಾಭ ಭಟ್



ಬೆಂಗಳೂರಿನ ಬಸವನಗುಡಿಯ ಗಡಿಯೊಳಗೇ ಹುಟ್ಟಿ ಬೆಳೆದ ಹುಡುಗಿ ಗಗನಾ. ಓದಿದ್ದು ಬಿಎಸ್‌ಸಿ. ಆದರೆ ಮನಸ್ಸು ತುಡಿಯುತ್ತಿದ್ದದ್ದು ಮಾತ್ರ ಆರ್ಟ್‌ನತ್ತ. ಆರ್ಟ್ ಅಂದರೆ ಕಲಿಕೆಯ ಕೋರ್ಸ್ ಅಲ್ಲ. ಸೃಜನಶೀಲ ಕಲೆಯ ವ್ಯವಸಾಯ.

ಕಾಲೇಜು ದಿನಗಳಲ್ಲಿಯೇ ಮಾಡೆಲಿಂಗ್‌ನಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ ಗಗನಾ ಹಲವು ಫೋಟೊಶೂಟ್‌ಗಳಲ್ಲಿ ಪಾಲ್ಗೊಂಡಿದ್ದರು. ನಂತರ ವೆಲ್‌ನೆಸ್ ಟ್ರೇನಿಂಗ್ ಅಡಿಯಲ್ಲಿ ಡಯಟ್ ಮತ್ತು ಫಿಟ್‌ನೆಸ್ ತರಬೇತಿ ಪಡೆದರು. ಅಲ್ಲಿಂದ ನಟನೆಯ ಕಡೆಗೆ ಅವರ ಗಮನ ಹರಿಯಿತು. ಆಡಿಷನ್‌ಗಳಲ್ಲಿ ಪಾಲ್ಗೊಳ್ಳಲು ಪ್ರಾರಂಭಿಸಿದರು.

ಇಡೀ ಚಿತ್ರರಂಗ ಕೊರೊನಾ ಕಾರಣಕ್ಕೆ ಪ್ಯಾಕಪ್ ಮಾಡಿಕೊಂಡಿದ್ದಾಗ, ಗಗನಾ ಮನಸ್ಸು ಮನೆಯಿಂದ ಆಚೆ ಜಿಗಿದು ಚಿತ್ರರಂಗದಲ್ಲಿ ಅಲೆಯತೊಡಗಿತ್ತು. ಎಲ್ಲಿಯೇ ಸಿನಿಮಾ ನಟಿಯರ ಫೋಟೊ ಕಂಡರೂ ನಾನೂ ಹೀಗೆ ಆಗಬೇಕು ಅನಿಸುತ್ತಿತ್ತು.

ಅವರ ಸಿನಿಮಾಪ್ರೇಮ ಫಲಕೊಟ್ಟಿದ್ದು ‘ಸಾಮರ್ಥ್ಯ’ ಅನ್ನುವ ಸಿನಿಮಾದ ಮೂಲಕ. ಎಚ್. ವಾಸು ಅವರ ನಿರ್ದೇಶನ 24ನೇ ಚಿತ್ರವಾಗಿರುವ ‘ಸಾಮರ್ಥ್ಯ’ಗೆ ಅವಕಾಶ ಸಿಕ್ಕಿದ್ದು ತನ್ನ ಅದೃಷ್ಟ ಎಂದೇ ಗಗನಾ ಅನಿಸಿಕೆ.

‘ವಾಸು ಅವರು ಅನುಭವಿ ನಿರ್ದೇಶಕರು. ಪ್ರತಿಭಾವಂತರು ಎಂದು ಸಾಬೀತುಮಾಡಿದವರೂ ಹೌದು. ಅವರ ಸಿನಿಮಾದ ಪಾತ್ರಕ್ಕೆ ನನ್ನ ಸ್ನೇಹಿತರೊಬ್ಬರು ನನ್ನ ಹೆಸರನ್ನು ಶಿಫಾರಸ್ಸು ಮಾಡಿದರು. ನನ್ನ ಆಡಿಷನ್ ಮಾಡಿದರು. ನಂತರ ಅವರಿಗೆ ಇಷ್ಟವಾಗಿ ಆಯ್ಕೆಯಾದೆ’ ಎಂದು ಚಿತ್ರಕ್ಕೆ ಆಯ್ಕೆಯಾದ ಬಗೆಯನ್ನು ಹೇಳುವ ಗಗನಾಗೆ ಮೊದಲ ಬಾರಿಗೆ ಕ್ಯಾಮೆರಾ ಎದುರಿಗೆ ನಿಂತಾಗ ತುಂಬ ಭಯವಾಗಿತ್ತಂತೆ.

‘ಮೊದಲ ಸಲ ಕ್ಯಾಮೆರಾ ಎದುರಿಸಿದಾಗ ತುಂಬ ನರ್ವಸ್ ಆಗಿದ್ದೆ. ಹೇಗೆ ನಟಿಸುತ್ತೇನೋ, ನಿರ್ದೇಶಕರ ನಿರೀಕ್ಷೆಯ ಮಟ್ಟ ತಲುಪುತ್ತೇನೋ ಇಲ್ಲವೋ ಎಂಬಿತ್ಯಾದಿ ಆತಂಕಗಳು ಕಾಡುತ್ತಿದ್ದವು. ಈಗ ಚಿತ್ರದ ಚಿತ್ರೀಕರಣ ಸುಮಾರು ಐವತ್ತರಷ್ಟು ಮುಗಿದಿದೆ. ಆದರೂ ನನ್ನ ಈ ಆತಂಕ ಕಮ್ಮಿಯೇನಾಗಿಲ್ಲ. ಖುಷಿಯ ವಿಚಾರವೆಂದರೆ ವಾಸು ಅವರು ತುಂಬ ಪ್ರೋತ್ಸಾಹ ಕೊಟ್ಟು, ನಟನೆಯ ಕೌಶಲವನ್ನು ಕಲಿಸಿಕೊಡುತ್ತಿದ್ದಾರೆ. ಈ ಸಿನಿಮಾದಿಂದ ನಾನು ಸಾಕಷ್ಟು ಸಂಗತಿಗಳನ್ನು ಕಲಿತುಕೊಳ್ಳುತ್ತಿದ್ದೇನೆ’ ಎನ್ನುತ್ತಾರೆ.

ಇದೊಂದು ಕಾಲೇಜು ಲವ್ ಸ್ಟೋರಿಯಂತೆ. ಇಂದಿನ ದಿನಗಳಲ್ಲಿ ಕಾಲೇಜುಗಳಲ್ಲಿ ಎಂಥ ಪರಿಸ್ಥಿತಿ ಇರುತ್ತದೆ. ಎಂಥ ಪ್ರೇಮಗಳು ಅಲ್ಲಿ ಘಟಿಸುತ್ತವೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಲು ಹೊರಟಿದ್ದಾರಂತೆ.

‘ಇದರಲ್ಲಿ ನಾನು ತುಂಬಾ ಮಾತಾಡುವ, ಲೈವ್ಲಿ, ಜೋವಿಯಲ್ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಇದು ನನ್ನ ಕನಸಿನ ಪಾತ್ರ. ಮೊದಲ ಸಿನಿಮಾದಲ್ಲಿಯೇ ಇಂಥದ್ದೊಂದು ಪಾತ್ರದಲ್ಲಿ ನಟಿಸಲು ಅವಕಾಶ ಸಿಕ್ಕಿರುವುದು ನನ್ನ ಅದೃಷ್ಟ’ ಎನ್ನುವ ಗಗನಾಗೆ ಎಲ್ಲ ರೀತಿಯ ಪಾತ್ರಗಳಲ್ಲಿಯೂ ಕಾಣಿಸಿಕೊಳ್ಳುವ ಆಸಕ್ತಿ ಇದೆ.

‘ಯಾವುದೇ ಪಾತ್ರವಾಗಲಿ, ನಾವು ಮಾಡಿ ನೋಡಿದಾಗಲೇ ಅದು ನಮ್ಮಿಂದ ಸಾಧ್ಯವೋ ಇಲ್ಲವೋ ಗೊತ್ತಾಗುವುದಲ್ಲವೇ? ಆ ಕಾರಣಕ್ಕಾಗಿಯಾದರೂ ಭಿನ್ನ ಪಾತ್ರಗಳಲ್ಲಿ ನಟಿಸಬೇಕು’ ಎನ್ನುತ್ತಾರೆ ಅವರು.

‘ನಮ್ಮದಲ್ಲದ ಪಾತ್ರದಲ್ಲಿ ನಾವು ನಮ್ಮ ನಿಜಸ್ವಭಾವವನ್ನು ಮರೆತು ಜಿಗಿಯುವುದೇ ನಟನೆ. ನನ್ನ ನಿಜವಾದ ಸ್ವಭಾವಕ್ಕೆ ವಿರುದ್ಧವಾದ ಪಾತ್ರದಲ್ಲಿ ನಟಿಸಿದರೂ, ಜನರಿಗೆ ಅದು ನನ್ನದೇ ಸ್ವಭಾವವೇನೋ ಅನಿಸಿದರೆ ಅದು ಒಳ್ಳೆಯ ನಟನೆ’ ಎಂದು ನಟನೆಯ ಕುರಿತು ವ್ಯಾಖ್ಯಾನಿಸುವ ಗಗನಾ, ‘ಸಾಮರ್ಥ್ಯ’ ಸಿನಿಮಾದ ಮೂಲಕ ತಮ್ಮ ನಟನೆಯ ಸಾಮರ್ಥ್ಯವನ್ನು ತೋರಿ ಚಂದನವನದ ಗಗನದಲ್ಲಿ ಮಿನುಗುವ ಉತ್ಸಾಹದಲ್ಲಿದ್ದಾರೆ. ■